**ದಿ: 06-03-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : **46** ರಿಂದ **51** ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ. ಟಿ.ಜಿ.ಆರ್. ರವರಿಂದ

ದಾವಾ ಆಸ್ತಿಗಳಲ್ಲಿ ವ್ಯವಸಾಯವನ್ನು ನಮ್ಮ ಹಿರಿಯರಾದ ಶಿವಮ್ಮ ಎನ್ನುವವರು ಮಾಡುತ್ತಿದ್ದರು. ಸದರಿ ಶಿವಮ್ಮಳಿಗೆ ಇಬ್ಬರು ಮಕ್ಕಳು. ಅವರ ಹೆಸರು ಅಣ್ಣು ದೇವಾಡಿಗ ಮತ್ತು ಶ್ರೀಮತಿ ಮುಡೂರಿ ದೇವಾಡಿಗ. 46 ರಿಂದ 51 ನೇ ಪ್ರತಿವಾದಿಗಳು ಸದರಿ ಅಣ್ಣು ದೇವಾಡಿಗನ ಮಕ್ಕಳು ಎಂದರೆ ಸರಿ. ಶ್ರೀಮತಿ ಮುಡೂರಿ ದೇವಾಡಿಗವಿಗೆ 3 ಜನ ಗಂಡು ಮಕ್ಕಳು ಮತ್ತು 4 ಜನ ಹೆಣ್ಣು ಮಕ್ಕಳು. ಅವರ ಹೆಸರು 1) ನಾಗು ದೇವಾಡಿಗ (1 ನೇ ಪ್ರತಿವಾದಿ), 2) ಮಂಜು ದೇವಾಡಿಗ (2 ನೇ ಪ್ರತಿವಾದಿ), 3) ರಾಮ ದೇವಾಡಿಗ (4 ನೇ ಪ್ರತಿವಾದಿ), 4) ದೇವದಾಸ ದೇವಾಡಿಗ (6 ನೇ ಪ್ರತಿವಾದಿ), 5) ಅಬ್ಬಕ್ಕ (3 ನೇ ಪ್ರತಿವಾದಿ), 6) ಮಹಾಕಾಳಿ (5 ನೇ ಪ್ರತಿವಾದಿ) ಮತ್ತು 7) ಮಾಚಿ (1 ನೇ ವಾದಿ) ಎಂದರೆ ಸರಿ. 7 ರಿಂದ 45 ನೇ ಪ್ರತಿವಾದಿಗಳು ಮಾಚಿ ದೇವಾಡಿಗಳ ಮೊಮ್ಮಕ್ಕಳು ಎಂದರೆ ಸರಿ.

ದಾವಾ ಜಮೀನುಗಳನ್ನು ನಮ್ಮ ಅಜ್ಜಿಯಾದ ಶಿವಮ್ಮ ಗೇಣಿಗೆ ತೆಗೆದುಕೊಂಡು ಸುಮಾರು 600 ವರ್ಷಗಳಿಂದ ವ್ಯವಸಾಯ ಮಾಡುತ್ತಿದ್ದಳು. ಶಿವಮ್ಮಳು ಯಾವ ರೀತಿಯ ಗೇಣಿಯ ಮೇರೆಗೆ ಸದರಿ ಜಮೀನುಗಳನ್ನು ವ್ಯವಸಾಯ ಮಾಡುತ್ತಿದ್ದಳು ಎನ್ನುವುದು ನನಗೆ ಗೊತ್ತಿಲ್ಲ. ನಮ್ಮ ಅಜ್ಜಿಯಾದ ಶಿವಮ್ಮಳು ಯಜಮಾನ್ತಿಯಾಗಿ ದಾವಾ ಜಮೀನುಗಳನ್ನು ನೋಡಿಕೊಳ್ಳುತ್ತಿದ್ದಳು ಎಂದರೆ ನನಗೆ ಖುದ್ದಾಗಿ ಗೊತ್ತಿಲ್ಲ. ನಮ್ಮ ಅಜ್ಜಿಯ ದಾವಾ ಜಮೀನುಗಳನ್ನು ಒಟ್ಟು ಕುಟುಂಬದ ಆಡಳಿತಾಧಿಕಾರಿಯಾಗಿ ನೋಡಿಕೊಳ್ಳುತಿದ್ದಳು ಎಂದರೆ ಸಾಕ್ಷಿ ಹಿರಿಯ ವ್ಯಕ್ತಿಯಾಗಿ ನೋಡಿಕೊಳ್ಳುತ್ತಿದ್ದಳು. ನಮ್ಮ ಅಜ್ಜಿ ಆಡಳಿತಾಧಿಕಾರಿಯಾಗಿ ಕೆಲಸ ಮಾಡಿದ ಬಗ್ಗೆ ಪತ್ರ ವ್ಯವಹಾರ ಮಾಡಿರುವುದನ್ನು ನಾನು ನೋಡಿರುವುದಿಲ್ಲ.

ಭೂ ಸುಧಾರಣಾ ಕಾಯಿದೆ ಬಂದ ನಂತರ ನಮ್ಮ ಅಜ್ಜಿ ಅರ್ಜಿ ಕೊಟ್ಟಿರುವುದನ್ನು ನಾನು ನೋಡಿರುವುದಿಲ್ಲ, ಆದರೆ ಕೇಳಿರುತ್ತೇನೆ. ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದನ್ನು ನಾನು ನೋಡಿಲ್ಲ. ನಿಶಾನೆ ಪಿ-1ರ ಪ್ರಕಾರ ನಮ್ಮ ಅಜ್ಜಿ 5 ಜಮೀನುಗಳಿಗೆ ಚಾಲಗೇಣಿದಾರಳಾಗಿ ಅರ್ಜಿ ಕೊಟ್ಟಿದ್ದಾಳೆ ಎಂದರೆ ಸಾಕ್ಷಿ ಕೊಟ್ಟಿರುತ್ತಾರೆ. ವಿಚಾರಣೆಯ ನಂತರ ನಮ್ಮ ಅಜ್ಜಿಯ ಪರವಾಗಿ 9 ಜಮೀನುಗಳಿಗೆ ತೀರ್ಪು ಆಗಿದೆ ಎಂದರೆ ಸರಿ. ಅರ್ಜಿ ನೀಡದ ಜಮೀನುಗಳಿಗೂ ಸಹ ಮಂಜೂರು ಮಾಡಲಾಗಿದೆ ಎಂದರೆ ಸರಿ. ಕುಟುಂಬದ ಸದಸ್ಯರ ಬಗ್ಗೆ ನಮ್ಮ ಅಜ್ಜಿ ಸಲ್ಲಿಸಿದ ಅರ್ಜಿಯಲ್ಲಿ ಬರೆದಿಲ್ಲ ಎಂದರೆ ಸರಿ.

"ಬಿ" ಶೆಡ್ಯೂಲನಲ್ಲಿರುವ ಜಮೀನುಗಳಲ್ಲಿ ಯಾವ ಯಾವ ಜಮೀನುಗಳನ್ನು ಭೂ ಸ್ವಾಧೀನ ಮಾಡಿಕೊಳ್ಳಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ ಎಂದರೆ ಸರಿ. ಭೂ ಸ್ವಾಧೀನಕ್ಕೆ ಸಂಬಂಧಿಸಿದಂತೆ ರೂ.36,00,000/- ವನ್ನು ಠೇವಣಿ ಇಡಲಾಗಿದೆ. ಅದಕ್ಕೆ ಸಂಬಂಧಿಸಿದಂತೆ ನೋಟಿಸು ಕೊಟ್ಟಿರುತ್ತಾರೆ.

ಮೂಡುರಿ ದೇವಾಡಿಗ ಮತ್ತು ಅಣ್ಣು ದೇವಾಡಿಗ ಮರಣ ಹೊಂದಿದ ನಂತರ ಅವರ ಮಕ್ಕಳುಗಳ ಹೆಸರುಗಳನ್ನು ಮಾತ್ರ ಪಹಣಿ ಪತ್ರಿಕೆಯಲ್ಲಿ ತರಲಾಗಿದೆ ಎಂದರೆ ಸರಿ. ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳಲ್ಲಿ ಮೂಡುರಿ ದೇವಾಡಿಗ ಮತ್ತು ಅಣ್ಣು ದೇವಾಡಿಗರ ಮೊಮ್ಮಕ್ಕಳ ಹೆಸರುಗಳನ್ನು ಸೇರಿಸಿಲ್ಲ ಎಂದರೆ ಸರಿ.

ಅಣ್ಣು ದೇವಾಡಿಗನನ್ನು ನಾನು ನೋಡಿರುತ್ತೇನೆ. ಅಣ್ಣು ದೇವಾಡಿಗರು ದಾವಾ ಆಸ್ತಿಗಳಲ್ಲಿ ಮೂಲ ಮನೆಯಲ್ಲಿ ಶಿವಮ್ಮ ವಾಸಮಾಡುತ್ತಿದ್ದ ಮನೆಯಲ್ಲಿ ವಾಸಮಾಡುತ್ತಿದ್ದರು.ಅಣ್ಣು ದೇವಾಡಿಗ ಮತ್ತು ಅವರ ಮಕ್ಕಳು ಮೂಲ ಮನೆಯಲ್ಲಿ ನಡೆಯುವ ದೇವರ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು ಎಂದರೆ ಸರಿಯಲ್ಲ. ನನಗೆ ಬುದ್ಧಿ ಬಂದ ನಂತರ ಅವರು ದೇವರ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವುದಿಲ್ಲ.

1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಶಿರಸಿಯಲ್ಲಿ ವಾಸ ಮಾಡುತ್ತಿದ್ದಾರೆ 3 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಬಾಡದಲ್ಲಿ ವಾಸಮಾಡುತ್ತಿದ್ದಾರೆ. 5 ನೇ ಪ್ರತಿವಾದಿ ಮತ್ತು 1 ನೇ ವಾದಿ ಯಡ್ತರೆಯಲ್ಲಿ ವಾಸಮಾಡುತ್ತಿದ್ದಾರೆ. ಮೃತ ಅಣ್ಣು ದೇವಾಡಿಗ ಪಡುವರಿಯಲ್ಲಿ ಹೆಂಡತಿ ಮನೆಯಲ್ಲಿ ವಾಸಮಾಡುತ್ತಿದ್ದರು. ಸಾಯುವ 3-4 ವರ್ಷಗಳ ಮೊದಲು ದಾವಾ ಆಸ್ತಿಗಳಲ್ಲಿ ಮೂಲ ಮನೆಗೆ ಬಂದಿದ್ದರು.

ದಾವಾ ಜಮೀನುಗಳು ಅಳಿಯ ಸಂತಾನ ಕಟ್ಟಿನ ಆಸ್ತಿಗಳು ಎಂದು ತೋರಿಸಲು ದಾಖಲೆಗಳು ಇರುವುದಿಲ್ಲ. ದಾವಾ ಆಸ್ತಿಗಳು ಮೂಡುರಿ ದೇವಾಡಿಗ ಮತ್ತು ಅಣ್ಣು ದೇವಾಡಿಗರ ಕುಟುಂಬಗಳ ನಡುವೆ ಸಮಾನವಾಗಿ 2 ಭಾಗಗಳಾಗ ತಕ್ಕ ಆಸ್ತಿಗಳು ಎಂದರೆ ಸುಳ್ಳು. ಅದೇ ರೀತಿ ಭೂಸ್ವಾಧೀನವಾದ ಜಮೀನುಗಳ ಪರಿಹಾರದಲ್ಲಿಯೂ ಸಹ 2 ಸಮಾನ ಭಾಗಗಳಾಗಬೇಕು ಎಂದರೆ ಸುಳ್ಳು. 46 ರಿಂದ 51 ನೇ ಪ್ರತಿವಾದಿಗಳಿಗೆ ದಾವಾ ಆಸ್ತಿಗಳಲ್ಲಿ ಮತ್ತು ಭೂ ಸ್ವಾಧೀನವಾದ ಪರಿಹಾರದಲ್ಲಿ ½ ಹಿಸ್ಸೆಯ ಹಕ್ಕಿದೆ ಎಂದರೆ ಸರಿಯಲ್ಲ. 46 ರಿಂದ 51 ನೇ ಪ್ರತಿವಾದಿಗಳಿಗೆ ದಾವಾ ದಾವಾ ಆಸ್ತಿಗಳಲ್ಲಿ ಮತ್ತು ಭೂ ಸ್ವಾಧೀನವಾದ ಪರಿಹಾರದಲ್ಲಿ ಇರುವ ½ ಹಿಸ್ಸೆಯ ಹಕ್ಕನ್ನು ಎತ್ತಿ ಹಾಕಲು ನಾವು ಮತ್ತು 1 ರಿಂದ 45 ನೇ ಪ್ರತಿವಾದಿಗಳು ಸೇರಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಣ್ಣು ದೇವಾಡಿಗನಿಗೆ ಸೇರಿದ 3 ಜಮೀನುಗಳನ್ನು ಸೇರಿಸಿ ಶಿವಮ್ಮನ ಹೆಸರಿಗೆ ನಮೂನೆ-10 ನ್ನು ನೀಡಲಾಗಿದೆ ಎಂದರೆ ಸುಳ್ಳು.

<u>ಪಾಟೀ ಸವಾಲು</u> : ಇತರೆ ಪ್ರತಿವಾದಿಗಳು ಮತ್ತು ಅವರ ಪರ ವಕೀಲರು ಗೈರು ಹಾಜರು. ಆದ್ದರಿಂದ ಅವರ ಪರ ಸಾಕ್ಷಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

<u>ಮರು ವಿಚಾರಣೆ</u> : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

ಹಿರಿಯ ಸಿವಿಲ್ ನ್ಯಾಯಾಧೀಶರು
ಕುಂದಾಪುರ